# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **724** |
| **ಸದಸ್ಯರ ಹೆಸರು** | **ಶ್ರೀ ತಿಪ್ಪಣ್ಣಪ್ಪ ಕಮಕನೂರ**<br>**(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **21.08.2026** |
| **ಉತ್ತರಿಸುವ ಸಚಿವರು** | **ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೆಂಪುಕಲ್ಲು ಗಣಿಗಾರಿಕೆ ಯಿಂದ ಅನೇಕ ಕಡೆ ಇಡೀ ಗ್ರಾಮದ ಭತ್ತದ ಗದ್ದೆಗಳು ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದು ಗಣಿ ಇಲಾಖೆಯವರ ಗಮನಕ್ಕೆ ಬಂದಿದೆಯೆ: ಇವರು ಗಣಿ ಇಲಾಖೆಯ ಅನುಮತಿ ಪಡೆದಿರುವರೆ ಪಡೆಯದೆ ಮಾಡುವ ಗಣಿಗಾರಿಕೆಗೆ ಎಷ್ಟು ದಂಡ ವಿಧಿಸಲಾಗಿದೆ (ತಾಲ್ಲೂಕುವಾರು ಭತ್ತದ ಗದ್ದೆಯ ರೈತನ ಹೆಸರಿನೊಂದಿಗೆ ಮಾಹಿತಿ ಒದಗಿಸುವುದು) | • ರಾಜ್ಯದಲ್ಲಿ ಕೆಂಪುಕಲ್ಲು (ಲ್ಯಾಟರೈಟ್) ಖನಿಜವು ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ಬೆಳಗಾವಿ, ಕಲಬುರಗಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಲಭ್ಯವಿರುತ್ತದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-3-A ರನ್ವಯ ಪಟ್ಟಾ ಜಮೀನುಗಳನ್ನು ಕೃಷಿ ಯೋಗ್ಯ ಜಮೀನನ್ನಾಗಿ ಅಭಿವೃದ್ಧಿಪಡಿಸಲು ಲ್ಯಾಟರೈಟ್ (ಕೆಂಪುಕಲ್ಲು) ಬ್ರಿಕ್ಸ್ ತೆಗೆಯಲು ಕಾರ್ಯಾದೇಶ ನೀಡಲಾಗುತ್ತದೆ. ನಿಯಮ-32 ರಂತೆ ಲ್ಯಾಟರೈಟ್ (ಕೆಂಪುಕಲ್ಲು) ಖನಿಜ ಮಾದರಿಯಲ್ಲಿ $Al_2O_3$ ಪ್ರಮಾಣವು ಶೇಕಡ 20% ಕ್ಕಿಂತ ಕಡಿಮೆ ಇರುವ ಸಂದರ್ಭಗಳಲ್ಲಿ ಲ್ಯಾಟರೈಟ್ (ಕೆಂಪುಕಲ್ಲು) ಉಪಖನಿಜವನ್ನು ತೆಗೆಯಲು ಲೈಸೆನ್ಸ್ ನೀಡಲಾಗುತ್ತದೆ.<br>• ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು/ ಕಲ್ಲು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ), ಜಿಲ್ಲಾ ಮರಳು ಸಮಿತಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿದೆ.<br>• ಅಧಿಸೂಚನೆ ಸಂಖ್ಯೆ: ಸಿಐ 21 ಎಂಎಂಎನ್ (2) 2014 ದಿನಾಂಕ: 21-01-2014 ರಂತೆ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 21 ಮತ್ತು 22ರಡಿ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-43 ಮತ್ತು 46 ರಂತೆ ಸದರಿ ಸಮಿತಿಯ ಸದಸ್ಯರುಗಳಿಗೆ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ಕ್ರಮವಹಿಸಲು, ಕಂದಾಯ, ಅರಣ್ಯ, ಪೋಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಿದೆ.<br>• ಅದರಂತೆ, ರಾಜ್ಯದಲ್ಲಿ ಅನುಮತಿ ಪಡೆಯದೆ ಕೆಂಪುಕಲ್ಲು ಗಣಿ ಚಟುವಟಿಕೆಗಳನ್ನು ಪತ್ತೆ ಹಚ್ಚಿ, ಅನಧಿಕೃತ ಗಣಿಗಾರಿಕೆ ನಡೆಸುತ್ತಿದ್ದವರ ವಿರುದ್ಧ ಎಂ.ಎಂ.(ಡಿ & ಆರ್) ಕಾಯ್ದೆ-1957 ಮತ್ತು ಕರ್ನಾಟಕ ಉಪಖನಿಜ |
| ಆ) | ಈ ಗಣಿಗಾರಿಕೆಯನ್ನು ನಿಲ್ಲಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು, ಗಣಿಗಾರಿಕೆ ಯಿಂದ ಭತ್ತ ಬೆಳೆಯುವಂತಹ ಭತ್ತದ ಗದ್ದೆಗಳೆಲ್ಲವೂ ನೀರು ತುಂಬಿದ ಈಜುಕೊಳದಂತಾಗಿದ್ದು ಇವುಗಳು ಮುಂದೆ ಯಾವುದೇ ಕೃಷಿ ಚಟುವಟಿಕೆಗೂ ಉಪಯುಕ್ತವಾಗಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | |

ರಿಯಾಯಿತಿ ನಿಯಮಗಳು -1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿದ್ದು, ದಂಡವನ್ನು ವಿಧಿಸಿ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

- ಕಲಬುರಗಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಬೆಳಗಾವಿ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿನ ಅನುಮತಿ ಪಡೆಯದೆ ಕೆಂಪುಕಲ್ಲು ಗಣಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ 2025-26ನೇ ಸಾಲಿನಲ್ಲಿ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಅನಧಿಕೃತ ಗಣಿಗಾರಿಕೆ ನಡೆಸುತ್ತಿದ್ದವರ ವಿರುದ್ಧ ಎಂ.ಎಂ.(ಡಿ & ಆರ್) ಕಾಯ್ದೆ-1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು - 1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದೆ.

| ಕ್ರ ಸಂ. | ಜಿಲ್ಲೆ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡ (ರೂ. ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|---|
| 1. | ಬೆಳಗಾವಿ | 4 | - | 4 |
| 2. | ದಕ್ಷಿಣ ಕನ್ನಡ | 19 | 15.62 | 1 |
| 3. | ಉಡುಪಿ | 40 | 15.29 | - |
| 4. | ಕಲಬುರಗಿ | 21 | 11.15 | - |
| 5. | ಉತ್ತರ ಕನ್ನಡ | 39 | 23.83 | 5 |
| | **ಒಟ್ಟು** | **123** | **65.89** | **10** |

ಲ್ಯಾಟರೈಟ್ (ಕೆಂಪುಕಲ್ಲು) ಗಣಿಗಾರಿಕೆಯಿಂದ ಗ್ರಾಮಗಳಲ್ಲಿನ ಭತ್ತದ ಗದ್ದೆಗಳು ನಾಶವಾಗಿರುವ ಬಗ್ಗೆ ಯಾವುದೇ ಪ್ರಕರಣಗಳು ಕಂಡುಬಂದಿಲ್ಲ.

ಸಂಖ್ಯೆ:ಸಿಐ-ಎಂಎಂಎಂ/345/2026

(ಎಸ್.ಎಸ್.ಮಲ್ಲಿಕಾರ್ಜುನ)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.